ಅಧ್ಯಕ್ಷರು : ಸ್ಟೇಟ್‌ಮೆಂಟ್ ಮಾಡುತ್ತಾರೆ. ರೇಷ್ಮೆ ಹುಳು ವಿಚಾರದಲ್ಲಿ 25ನೇ ತಾರೀಖು ಚರ್ಚೆ ಮಾಡೋಣ.

ಶ್ರೀ ಎಂ. ಎಸ್. ಪಾಟೀಲ್ : ಅಧ್ಯಕ್ಷರೆ, ಇದರ ಬಗ್ಗೆ ಆಮೇಲೆ.....

ಪ್ರವಾಸ ಪೀಡಿತ ಪ್ರದೇಶಗಳಿಗೆ ಪರಿಹಾರ.

+ ಶ್ರೀ ಪಾಟಾಳ್ ನಾಗರಾಜ್ (ಚಾಮರಾಜನಗರ) : ಅಧ್ಯಕ್ಷರೆ, ಪ್ರವಾಹ ಪೀಡಿತ ಪ್ರದೇಶಗಳಿಗೆ ಪರಿಹಾರದ ಬಗ್ಗೆ ನಾವು ಒಂದೇ ಸಮನೆ ಚರ್ಚೆಗೆ ಕೇಳುತ್ತಿದ್ದೇವೆ. ತಾವು ನಾಳೆ ಅಥವಾ ನಾಡಿದ್ದು ಚರ್ಚೆ ಮಾಡೋಣವೆಂದು ಹೇಳಿದ್ದಿರಿ. ತಮಗೆ ನಾನು ಹೇಳುತ್ತಿದ್ದೇನೆ. ಮಂಡ್ಯ ಮೈಸೂರು ಹಾಸನ ಈ ಪ್ರದೇಶಗಳಲ್ಲಿ ಪ್ರವಾಹ ಪೀಡಿತಕ್ಕೆ ಒಳಗಾಗಿರುವಂತಹ ಜನ ಅನುಭವಿಸುತ್ತಾ ಇರುವಂತಹ ಕಷ್ಟಗಳಿಗೆ ಇವತ್ತಿನವರೆಗೂ ಪರಿಹಾರ ಕೊಟ್ಟಿಲ್ಲ. ಸಮಗ್ರವಾಗಿ ಈ ಸಭೆಯಲ್ಲಿ ಚರ್ಚೆಯಾಗಬೇಕಾಗಿದೆ. ಪ್ರತಿಯೊಂದನ್ನೂ ತಾವು 25,27 ಎಂದು ಹೇಳಿದರೆ ಅವತ್ತು 30 ಗಂಟೆ ಇರುವುದಿಲ್ಲ, 24 ಗಂಟೆನೆ ತಮಗೆ ತೊಂದರೆ ಕೊಡುವಂತಹ ಪರಿಸ್ಥಿತಿಗೆ ನಾವು ಹೋಗುತ್ತೇವೆ. ದಯವಿಟ್ಟು ಒಂದು ಪಾಠ ಸಭೆಯನ್ನು ಮುಂದಕ್ಕೆ ಹಾಕುವುದಾದರೆ ಅವನ್ನು ಸ್ವಲ್ಪ ಚರ್ಚೆ ಮಾಡಬಹುದು.

ಅಧ್ಯಕ್ಷರು : ಸದನ ಕಾರ್ಯಕಲಾಪಗಳ ಸಮಿತಿ ಸಭೆ ಕರೆಯುತ್ತೇವೆ ಅಲ್ಲಿ ನೀವು ಸಲಹೆ ಮಾಡಿ. ಕಾವೇರಿ ಚರ್ಚೆ ಅಪೂರ್ಣವಾಗಿದೆ. ನೀವು ಪ್ರಾರಂಭ ಮಾಡಿರುವಂತಹ ಚರ್ಚೆಯನ್ನು 25 ಅಥವಾ 26ಕ್ಕೆ ಮುಂದುವರಿಸೋಣ.

ಶ್ರೀ ಪಾಟಾಳ್ ನಾಗರಾಜ್ : ನಾವೆಲ್ಲಾ ಸಹಿ ಹಾಕಿ ಕೊಟ್ಟಿರುವಂತಹದ್ದು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ : ಅಧ್ಯಕ್ಷರೆ, ನಾನು ಇವಕ್ಕೆ ಉತ್ತರ ಹೇಳುತ್ತೇನೆ. ಅಧ್ಯಕ್ಷರೆ, ಇದು ತಮಗೆ ಗೊತ್ತಿದೆ. ಇದು ಶ್ರೀಮಾನ್ ಚಂದ್ರೇಗೌಡರು ಅವನ್ನು ರೈಸ್ ಮಾಡಿದ ಮೇಲೆ ನಾನು ಸದನದಲ್ಲಿ ಸ್ಟೇಟ್‌ಮೆಂಟ್ ಮಾಡಿದ್ದೇನೆ ಮತ್ತು ಪರಿಹಾರ ಕೊಟ್ಟಿದ್ದೇನೆ ಅವನ್ನು ಕೂಡ ಸರಕ್ಯುಲೇಟ್ ಮಾಡಿದ್ದೇನೆ. ಅದರ ಮೇಲೆ ಚರ್ಚೆ ಅಪೂರ್ಣವಾಗಿ ಉಳಿದಿದೆ ಅಷ್ಟೇ. ಸ್ಟೇಟ್‌ಮೆಂಟ್ ಮಾಡಿಲ್ಲ. ಅಂದರೆ ಅದು ಸರಿಯಲ್ಲ. ತಾವು ಆ ದಿವಸ ಇರಲಿಲ್ಲ.

ಶ್ರೀ ಪಾಟಾಳ್ ನಾಗರಾಜ್ : ಅಧ್ಯಕ್ಷರೆ, ಸ್ವಲ್ಪ ಚರ್ಚೆ ಅಪೂರ್ಣವಾಗಿದೆ. ಪೇಳಿಕೆ ಪ್ರತಿ ಬಂದಿದೆ. ಸರ್ಕಾರ ಸರಿಯಾಗಿ ಆ ಪ್ರದೇಶ ನೋಡಲಿಲ್ಲ. ಮಂಡ್ಯ ಮೈಸೂರು, ಹಾಸನ ಪ್ರದೇಶವನ್ನು ಸಂಪೂರ್ಣವಾಗಿ ಕಡೆಗಣಿಸಿದ್ದಾರೆ. ಅಲ್ಲಿ ಆಗಿರತಕ್ಕ ಪರಿಸ್ಥಿತಿ ಬೇರೆ ದುರಂತಕ್ಕೆ ಸಿಕ್ಕಿರತಕ್ಕ ಪರಿಸ್ಥಿತಿ ಬೇರೆ ಇವರು ಕೊಟ್ಟಿರತಕ್ಕಂಥ ಪೇಳಿಕೆ ಬೇರೆ. ಇದಕ್ಕಾಗಿ ಸಮಗ್ರವಾಗಿ ಚರ್ಚೆ ಆಗಬೇಕೆಂದು ತಮ್ಮಲ್ಲಿ ಕೇಳಿದ್ದು.

ಶ್ರೀ ಬಿ.ಪಿಚ್. ಬನ್ನಿಕೋಡ್ : ಅಧ್ಯಕ್ಷರೇ, 11 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದಾರೆ ಒಂದು ಪೈಸೆ ಹಣ ಬಿಡುಗಡೆ ಆಗಿಲ್ಲ. ರಸ್ತೆಗಳು ಹಾಳಾಗಿ ಹೋಗಿವೆ.

(iii) ಸಹಕಾರಿ ಸಂಘಗಳಿಗೆ ಚುನಾವಣೆ

+ ಶ್ರೀ ಆರ್. ವಿ. ದೇಶಪಾಂಡೆ : ಅಧ್ಯಕ್ಷರೆ, ಸರ್ಕಾರದ ಆದೇಶದ ಪ್ರಕಾರ ನಾವೀ ರಾಜ್ಯದಲ್ಲಿ ಸಹಕಾರ ಸಂಘಗಳ ಚುನಾವಣೆ ಆಗುತ್ತಿದೆ. ಆದರೆ ಈ ಚುನಾವಣೆಯಲ್ಲಿ ಈಗಾಗಲೇ ಯಾರು ನಿಫಾಲ್ಟರ್ಸ್ ಇವ್ವಾರೆ ಅವರಿಗೆ ತಾವು ವೋಟಿಂಗ್ ರೈಟ್ ಕೊಟ್ಟಿರಿ. 10 ನೇ ತಾರೀಖು ಮುಗಿಯಿತು. 10-9-91 ಕ್ಕೆ ಆ ಆಜ್ಞೆ ಮುಗಿದಿದೆ. ಇದರ ಮುಂದೆ ಚುನಾವಣೆ ನಿಲ್ಲಿಸಿಬಿಡುತ್ತವೆ ಅದು ಬಹಳ